1	2	3	4	5	6	7	8
ಗುಂಡ್ಲುಪೇಟೆ	531	0	0.00				
ಒಟ್ಟು	**1609**	**0**	**0.00**	**35.000**	**33.000**	**2.000**	

ಯೋಜನೆ: ನವಗ್ರಾಮ ಆಶ್ರಯ (ರೂ. ಲಕ್ಷಗಳಲ್ಲಿ)

ಕ್ಷೇತ್ರ	ಗುರಿ	ಪ್ರಗತಿ		ಬಿಡುಗಡೆ ಮಾಡಿದ ಹಣ	ಖರ್ಚಾದ ಹಣ	ಖರ್ಚಾಗದೆ ಉಳಿದಿರುವ ಹಣ	ಷರಾ
		ಪೂರ್ಣವಾದ ಮನೆಗಳ ಸಂಖ್ಯೆ	ಪೂರ್ಣವಾದ ಮನೆಗಳಿಗೆ ಬೇಕಾಗುವ ಹಣ				
ಚಾಮರಾಜನಗರ	240	0	0.00	0.000	0.000	0.000	
ಸಂತೇಮಾರನಹಳ್ಳಿ	240	0	0.00	0.000	0.000	0.000	
ಗುಂಡ್ಲುಪೇಟೆ	240	0	0.00	0.000	0.000	0.000	
ಹೊನ್ನಾರ	240	0	0.00	12.500	12.000	0.000	
ಕೊಳ್ಳೇಗಾಲ	145	0	0.00	5.000	5.000	2.600	
ಯಳಂದೂರು	95	0	0.00	0.000	0.000	0.000	
ಒಟ್ಟು	**1200**	**0**	**0.00**	**17.500**	**14.900**	**2.600**	

ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ತಲೆದೋರಿರುವ ಕುಡಿಯುವ ನೀರು ಸರಬರಾಜಿನ ಬಗ್ಗೆ

2945(2898) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗಾಗಿ ಎಷ್ಟು ಕೊಳವೆ ಬಾವಿಗಳನ್ನು ತಗೆಸಲಾಗಿದೆ; ಇದರಲ್ಲಿ ನೀರು ಬಂದ ಹಾಗೂ ವಿಫಲವಾದ ಬಾವಿಗಳ ಸಂಖ್ಯೆ ಎಷ್ಟು; ಕ್ಷೇತ್ರವಾರು ನೀಡುವುದು;

ಆ) ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಿಗೆ ಕುಡಿಯುವ ನೀರಿಗಾಗಿ ಸರ್ಕಾರ ಮಂಜೂರು ಮಾಡಿರುವ ಹಣ ಎಷ್ಟು; ಇದರಲ್ಲಿ ಬಿಡುಗಡೆ ಆದ ಹಾಗೂ ಬಿಡುಗಡೆ ಮಾಡಬೇಕಾಗಿರುವ ಹಣ ಎಷ್ಟು; ಈವರೆವಿಗೂ ಖರ್ಚಾಗಿರುವ ಹಣ ಎಷ್ಟು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು)

ಅ,ಆ) ಸರ್ಕಾರದಿಂದ ಜಿಲ್ಲಾವಾರು ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2898ರ ಉತ್ತರದ ಲಗತ್ತು
ಅನುಬಂಧ–1 / Annexure-1

ಮೈಸೂರು ಜಿಲ್ಲೆ ವಲಯ ಸುಧಾರಣೆ ಯೋಜನೆ ವ್ಯಾಪ್ತಿಯಲ್ಲಿ ಇದ್ದು ಸರ್ಕಾರದಿಂದ ಸಾಮಾನ್ಯ ಕಾರ್ಯಕ್ರಮದಡಿ ಅನುದಾನ ಬಿಡುಗಡೆ ಪ್ರಶ್ನೆ ಬರುವುದಿಲ್ಲ. ಸಂಪೂರ್ಣ ಕೇಂದ್ರ ಪುರಸ್ಕೃತ ಅನುದಾನದಲ್ಲಿ ಸಮುದಾಯ ಆಧಾರಿತ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಆದಾಗ್ಯೂ 2002–03 ಮತ್ತು 2003–04ರ ಸಾಲಿನಲ್ಲಿ ರಾಜ್ಯ ಮತ್ತು ಕೇಂದ್ರ ವಲಯಗಳಡಿ ಮುಂದುವರಿದ ಯೋಜನೆಗಳನ್ನು ಪೂರ್ಣಗೊಳಿಸಲು ಅನುಕೂಲವಾಗುವಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಆದುದರಿಂದ ಆಯವ್ಯಯ ಲಿಂಕ್ ಪುಸ್ತಕದಲ್ಲಿ ಸದರಿ ಜಿಲ್ಲಾ ಪಂಚಾಯತ್ ಒದಗಿಸಿಕೊಂಡ ಅನುದಾನಕ್ಕೆ ಪೂರಕವಾಗಿ ಅನುದಾನವನ್ನು ಬಿಡುಗಡೆ ಮಾಡಲು ಬರುವುದಿಲ್ಲ. ಮತ್ತು ಯಾವುದೇ ಜಿಲ್ಲಾ ಪಂಚಾಯತ್ ರಾಜ್ ವಲಯದಡಿ ಒದಗಿಸಿಕೊಂಡ ಅನುದಾನಕ್ಕೆ ಸಮನಾಗಿ ಮಾತ್ರ ಕೇಂದ್ರ ವಲಯದಡಿ ಅನುದಾನವನ್ನು ಬಿಡುಗಡೆ ಮಾಡಲು ಅವಕಾಶವಿರುತ್ತದೆ.

ಜಿಲ್ಲೆ	ಆಯವ್ಯಯದಲ್ಲಿ ಒದಗಿಸಿಕೊಂಡ ಅನುದಾನ	2002–03ರಲ್ಲಿ ಬಿಡುಗಡೆ ಮಾಡಿರುವ ಅನುದಾನ	ಮೇಚ್ಚ
ರಾಜ್ಯ ವಲಯ			
ಮೈಸೂರು	352.57	531.89	417.47
ಚಾಮರಾಜನಗರ	193.33	253.83	212.18
ಕೇಂದ್ರ ವಲಯ			
ಮೈಸೂರು	433.38	103.49	217.93
	114.44 (OB)		
ಚಾಮರಾಜನಗರ	275.00	359.99	359.99
(PMGY-RWS)	44.50	44,50	66.71
	(OB 27.21)		
CRF/NCCF		205.00	20.500

2003–04ನೇ ಸಾಲಿನಲ್ಲಿ ಮೈಸೂರು ಜಿಲ್ಲೆಗೆ ರಾಜ್ಯ ವಲಯದಡಿ ರೂ. 146.78 ಲಕ್ಷಗಳನ್ನು ಮತ್ತು ನಡಿ ರೂ. 149.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಅಂತೆಯೇ ಚಾಮರಾಜನಗರ ಜಿಲ್ಲಾ ಪಂಚಾಯತಿಯ ರಾಜ್ಯ ವಲಯದಡಿ ರೂ. 155.45 ಲಕ್ಷಗಳನ್ನು ಕುಡಿಯುವ ನೀರಿನ ಬಾಬ್ತಿಗಾಗಿ ಒದಗಿಸಿಕೊಂಡಿದ್ದು, ರೂ. 59.88 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಕೇಂದ್ರ ವಲಯದಡಿ ರೂ. 445.00 ಲಕ್ಷಗಳನ್ನು ಅಸಂಭವನೀಯವಾಗಿ ಒದಗಿಸಿಕೊಂಡಿದ್ದು, ರೂ. 202.90 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ಕಂದಾಯ ಇಲಾಖೆಯು CRF ನಡಿ ರೂ. 120.00 ಲಕ್ಷಗಳನ್ನು ಕುಡಿಯುವ ನೀರಿನ ಸಲುವಾಗಿ ಬಿಡುಗಡೆ ಮಾಡಿದೆ. ಪ್ರಸಕ್ತ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಗೆ RMGY-RWS ನಡಿ ರೂ. 44.80 ಲಕ್ಷಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.

ಅನುದಾನ ಹಂಚಿಕೆಯನ್ನು ಆಯಾಯ ಜಿಲ್ಲಾ ಪಂಚಾಯತಿಗಳು ಅವಶ್ಯಕತೆ ಆಧರಿಸಿ ತಾಲ್ಲೂಕುವಾರು ಮಾತ್ರ ಮಾಡುತ್ತವೆ. ಕ್ಷೇತ್ರವಾರು ಅನುದಾನ ಹಂಚಿಕೆಯಾಗಿರುವುದಿಲ್ಲ. 2002–03ನೇ ಸಾಲಿನಲ್ಲಿ ಮೈಸೂರಿನ 7 ತಾಲ್ಲೂಕುಗಳಲ್ಲಿ ಕೊರೆದಿರುವ ಒಟ್ಟು 247 ಕೊಳವೆ ಬಾವಿಗಳ ಪೈಕಿ 234 ಕೊಳವೆ ಬಾವಿಗಳು ಸಫಲವಾಗಿವೆ ಹಾಗೂ 13 ಕೊಳವೆ ಬಾವಿಗಳು ವಿಫಲವಾಗಿರುತ್ತವೆ. ಅಂತೆಯೇ ಚಾಮರಾಜನಗರ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಒಟ್ಟು 371 ಕೊಳವೆ ಬಾವಿಗಳನ್ನು ಕೊರೆದಿದ್ದು, ಅವುಗಳನ್ನು 360 ಸಫಲವಾಗಿದ್ದು ಉಳಿದ 11 ವಿಫಲವಾಗಿವೆ.

ಚಾಮರಾಜನಗರ ಮತ್ತು ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ಗ್ರಂಥಾಲಯ ಮಂಜೂರಾತಿ ಕುರಿತು

2946(2900) ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ, ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಮಂಜೂರು ಮಾಡಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು;

ಆ) ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಗ್ರಂಥಾಲಯಗಳನ್ನು ಮಂಜೂರು ಮಾಡಲಾಗಿದೆ: ಗ್ರಾಮವಾರು ವಿವರ ನೀಡುವುದು:

ಇ) ಮೇಲ್ಕಂಡ ಜಿಲ್ಲೆಗಳ ವ್ಯಾಪ್ತಿಯಲ್ಲಿ ಮಂಜೂರು ಮಾಡಲು ಉದ್ದೇಶಿಸಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು; ಯಾವ ಯಾವ ಗ್ರಾಮಗಳಿಗೆ ಮಂಜೂರು ಮಾಡಲಾಗುವುದು: ಕ್ಷೇತ್ರವಾರು ಹಾಗೂ ಗ್ರಾಮವಾರು ವಿವರಗಳನ್ನು ನೀಡುವುದು?

ಶ್ರೀ ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ) ಚಾಮರಾಜನಗರ ಜಿಲ್ಲೆ – 80 ಹಾಗೂ
ಮೈಸೂರು ಜಿಲ್ಲೆ – 133

ಆ) ಪಟ್ಟಿ ಲಗತ್ತಿಸಿದೆ.

ಇ) ಚಾಮರಾಜನಗರ ಜಿಲ್ಲೆ – 47
ಮೈಸೂರು ಜಿಲ್ಲೆ – 109
ಪಟ್ಟಿ ಲಗತ್ತಿಸಿದೆ.

ಹಣಕಾಸಿನ ಪರಿಮಿತಿಯಲ್ಲಿ ಹಂತ ಹಂತವಾಗಿ ಪ್ರಾರಂಭಿಸಲು ಯೋಜನೆ ಇದೆ.

ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಮಂಜೂರು ಮಾಡಿರುವ ಹಾಗೂ ಮಂಜೂರು ಮಾಡಲು ಉದ್ದೇಶಿಸಿರುವ ಮತ ಕ್ಷೇತ್ರವಾರು, ಗ್ರಾಮಾವಾರು ಗ್ರಂಥಾಲಯಗಳ ಪಟ್ಟಿ.

ಕ್ರ. ಸಂ.	ಕ್ರ. ಸಂ.	ಮಂಜೂರಾದ ಗ್ರಂಥಾಲಯಗಳ ಹೆಸರು	ಕ್ರ. ಸಂ.	ಕ್ರ. ಸಂ.	ಮಂಜೂರು ಮಾಡಲು ಉದ್ದೇಶಿಸಿರುವ ಗ್ರಂಥಾಲಯಗಳ ಹೆಸರು
		ಗುಂಡ್ಲುಪೇಟೆ			
1.	1.	ಬೇಗೂರು	1.	1.	ಬರಗಿ
2.	2.	ಚಿಕ್ಕಾಟೆ	2.	2.	ಕಣ್ಣೇಗಾಲ